


# ನಿತೇಶ್: ಬಂಗಾರದಂಥ ಸ್ಫೂರ್ತಿ ಕಥನ

PARiS 2024

ಹದಿನೈದು ವರ್ಷಗಳ ಹಿಂದೆ ಆಕಸ್ಮಾತ್ತಾಗಿ ಚಲಿಸುವ ರೈಲಿನಿಂದ ಆಯತಪ್ಪಿ ಬಿದ್ದಿದ್ದೇ ಎಡಗಾಲನ್ನು ನಿತೇಶ್ ಕುಮಾರ್ ಕಳೆದುಕೊಳ್ಳಬೇಕಾಯಿತು. ಆದಾಗಿ ಇನ್ನೂ ಹದಿನೈದು ವರ್ಷಗಳ ನಂತರ ಅವರು ಪ್ಯಾರಿಸ್‌ನಲ್ಲಿ ನಡೆದ ಪ್ಯಾರಾ ಬ್ಯಾಡ್ಮಿಂಟನ್‌ನಲ್ಲಿ ಪ್ಯಾರಾಲಿಂಪಿಕ್ ಚಿನ್ನದ ಪದಕ ಗೆದ್ದು ಬೀಗಿದ್ದಾರೆ. ಅವರ ಹೋರಾಟದ ಹೆಜ್ಜೆಗಳು ಎಂಥವರಿಗೂ ಆತ್ಮಸ್ಥೈರ್ಯ ತುಂಬಬಲ್ಲವು.

■ **ವಿಶಾಖ ಎನ್.**

ನಿತೇಶ್ ಕುಮಾರ್ ಹೆಸರನ್ನು ಅನುರಣಿಸುವಂತೆ ಕೆಲವರು ಇತ್ತೀಚೆಗೆ ಹೇಳಲು ಕಾರಣವಿತ್ತು. ಪ್ಯಾರಾಲಿಂಪಿಕ್‌ನಲ್ಲಿ ಪ್ಯಾರಾ–ಶಟ್ಲರ್ ಆಗಿ ಅವರು ತೋರಿದ ಹೋರಾಟ ಹಾಗಿತ್ತು. ಮೊದಲ ಎರಡು ಸೆಟ್‌ಗಳಲ್ಲಿ ಒಂದನ್ನು ತಾವು ಗೆದ್ದು, ಇನ್ನೊಂದನ್ನು ಎದುರಾಳಿಗೆ ಬಿಟ್ಟುಕೊಡಬೇಕಾಗಿ ಬಂದಿತ್ತು. ನಿರ್ಣಾಯಕ ಸೆಟ್ಟೂಡ ಡ್ಯೂಸ್ ಆಗಿ, ವಿಜಯಲಕ್ಷ್ಮಿ ಅತ್ತಿತ್ತ ಎನ್ನುವ ಸ್ಥಿತಿ. ಆ ಹಂತದಲ್ಲಿ ನಿತೇಶ್ ಕುಮಾರ್ ಸಂಯಮ ಫಲ ಕೊಟ್ಟಿತು. ಒಂದು ತಾಸು 20 ನಿಮಿಷಗಳ ಆಟದಲ್ಲಿ ಅವರು ಚಿನ್ನದ ಪದಕಕ್ಕೆ ಕೊರಳೊಡ್ಡುವಂತಹ ಗೆಲುವನ್ನು ದಾಖಲಿಸಿದರು. ಎದುರಲ್ಲಿ ಇದ್ದುದು ಗ್ರೇಟ್‌ಬ್ರಿಟನ್‌ನ ಡೇನಿಯೆಲ್ ಬ್ರೆತೆಲ್.

ಬ್ರೆತೆಲ್ ಅವರು ಬ್ರಿಟ್ ಎಂಬ ಪೆಟ್ ನೇಮ್‌ನಿಂದಲೇ ಪರಿಚಿತರು. ಇದುವರೆಗೆ 10 ಸಲ ಅವರ ವಿರುದ್ಧ ಆಡುವ ಅವಕಾಶ ನಿತೇಶ್ ಕುಮಾರ್ ಅವರಿಗೆ ಸಿಕ್ಕಿತ್ತು. ಆದರೆ, ಗೆದ್ದಿದ್ದು ಚಿನ್ನದ ಪದಕಕ್ಕಾಗಿ ಈ ಸಲ ನಡೆದ ಪಂದ್ಯದಲ್ಲಿ ಮಾತ್ರ. ಮೊದಲ ಸೆಟ್‌ನಲ್ಲಿ 21–14ರಲ್ಲಿ ಗೆಲುವನ್ನು ತಮ್ಮದಾಗಿಸಿಕೊಂಡ ನಿತೇಶ್, ಎರಡನೇ ಸೆಟ್‌ನಲ್ಲಿ ಪೈಪೋಟಿ ಎದುರಿಸಿ, 18–21ರಲ್ಲಿ ಸೋಲುಂಡರು. ಹೀಗಾಗಿ ಕೊನೆಯ ಸೆಟ್‌ನಲ್ಲಿ ತುರುಸಿನ ಆಟ ನೋಡಲು ಸಿಕ್ಕಿತು.

ನಿತೇಶ್ ರಾಜಸ್ಥಾನದವರು. 2009ರಲ್ಲಿ ರೈಲು ಅಪಘಾತಕ್ಕೆ ಈಡಾಗಿ ಒಂದು ಕಾಲು ಕಳೆದುಕೊಂಡರು. ತಿಂಗಳುಗಟ್ಟಲೆ ಹಾಸಿಗೆ ಹಿಡಿದಿದ್ದರು. ಹಾಸಿಗೆಯಲ್ಲಿ ಹಾಗೆಯೇ ಇರಬಾರದೆಂದು ಐಐಟಿ (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ) ಪರೀಕ್ಷೆಗೆ ತಯಾರಿ ನಡೆಸಿದರು. ಮಂಡಿ, ಐಐಟಿಯಲ್ಲಿ ಸೀಟ್ ಕೂಡ ಸಿಕ್ಕಿತೆನ್ನಿ. ಪುಣೆಯ ಕೃತಕ ಕಾಲು ಅಳವಡಿಸುವ ಘಟಕಕ್ಕೆ ಭೇಟಿ ನೀಡಿದಾಗ ನಿತೇಶ್ ಅವರಿಗೆ ಬದುಕಿನ ಸ್ಫೂರ್ತಿ ಕಥನಗಳು ಕಂಡವು. ಯುದ್ಧದಲ್ಲಿ ಹೋರಾಡಿ ಕಾಲುಗಳನ್ನು ಕಳೆದುಕೊಂಡ ಯೋಧರು, ಕೃತಕ ಕಾಲುಗಳನ್ನು ಅಳವಡಿಸಿಕೊಂಡು ಬದುಕಿನ ಮುಂದಿನ ಅಧ್ಯಾಯಗಳನ್ನು ಬರೆಯಲು ಅಣಿಯಾಗುತ್ತಿದ್ದುದನ್ನು ನೋಡಿದರು. ಅಷ್ಟೊಂದು ತೀವ್ರವಾಗಿ ಗಾಯಗೊಂಡವರಲ್ಲಿ ಉಳಿದಿದ್ದ ಜೀವನಪ್ರೀತಿ ಇವರಲ್ಲೂ ಏನಾದರೂ ಸಾಧಿಸಬೇಕು ಎನ್ನುವ ಹುಮ್ಮಸ್ಸು ಮೂಡಿಸಿತು.

2013ರಲ್ಲಿ ಐಐಟಿ, ಮಂಡಿಯಲ್ಲಿ ಪ್ರವೇಶವಾಯಿತು. ಬ್ಯಾಡ್ಮಿಂಟನ್ ಕನಸಿಗೆ

